## ಮನೆ-ಮನ ತುಂಬಿದ ಅಮೃತ ಮಹೋತ್ಸವ ಸಂಭ್ರಮ

1

ದೇಶ ಸ್ವಾತಂತ್ರ್ಯ ಗಳಿಸಿ ಎಪ್ಪತ್ತೈದು ವರ್ಷಗಳಾದವು. 2022 'ಅಮೃತ ಮಹೋತ್ಸವ' ಸಂಭ್ರಮದ ವರ್ಷ. ಆಗಸ್ಟ್ ತಿಂಗಳಲ್ಲಿ ದೇಶದ ಉದ್ದಗಲಕ್ಕೂ ಸಂಭ್ರಮದ ತರಂಗಗಳನ್ನು ಎಬ್ಬಿಸಿದ ಈ ಘಟನೆ, 2023ರ ಆಗಸ್ಟ್‌ವರೆಗೂ ಮುಂದುವರೆಯಲಿದೆ. ಆಗಸ್ಟ್ 15ರಂದು ನಾಗರಿಕರು ತಮ್ಮ ಮನೆಗಳ ಮೇಲೆ ತ್ರಿವರ್ಣಧ್ವಜವನ್ನು ಹಾರಿಸಿ ಸಂಭ್ರಮಿಸುವ ಮೂಲಕ, 'ಅಮೃತ ಮಹೋತ್ಸವ' ಮನೆಮನೆಗಳಲ್ಲೂ ಅನುರಣನಗೊಂಡಿತು. ಸಾಮಾನ್ಯವಾಗಿ ಶಾಲೆ, ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ಸೀಮಿತವಾಗಿರುತ್ತಿದ್ದ 'ಸ್ವಾತಂತ್ರ್ಯ ದಿನಾಚರಣೆ' ಈ ವರ್ಷ ಜನಸಾಮಾನ್ಯರ ಸಂಭ್ರಮವಾಗಿಯೂ ರೂಪುಗೊಂಡಿತು. ದೇಶಪ್ರೇಮದ ಅಭಿವ್ಯಕ್ತಿ ಹಾಗೂ ದೇಶದ ಸಮಗ್ರತೆಯ ಅನಾವರಣಕ್ಕೆ ಅಮೃತ ಮಹೋತ್ಸವ ಸಂದರ್ಭ ಪ್ರೇರಣೆಯಾಗಿ ಪರಿಣಮಿಸಿದೆ. ಸ್ವತಂತ್ರ ಭಾರತದ ಏಳೂವರೆ ದಶಕಗಳ ಪಯಣದಲ್ಲಿ ದೇಶ ಅಸಾಧಾರಣ ಸವಾಲುಗಳನ್ನು ಎದುರಿಸಿದೆ. ಆ ಸವಾಲುಗಳ ಅವಲೋಕನ ಮತ್ತು ಸಾಧನೆ–ಸಿದ್ಧಿಯ ವಿಶ್ಲೇಷಣೆಗೂ ಅಮೃತ ಮಹೋತ್ಸವ ಅವಕಾಶ ಕಲ್ಪಿಸಿದೆ.



ಯುದ್ಧ ವಿಮಾನ ವಾಹಕ ನೌಕೆ 'ಐ.ಎನ್.ಎಸ್. ವಿಕ್ರಮಾದಿತ್ಯ'ದ ಸಿಬ್ಬಂದಿಯ ಅಮೃತ ಮಹೋತ್ಸವ ಸಂಭ್ರಮ



ಪುನೀತ್‌ಗೆ ಪತ್ನಿ–ಪುತ್ರಿಯಿಂದ 'ಕರ್ನಾಟಕ ರತ್ನ' ಪದಕ ಸಮರ್ಪಣೆ

## ನಾಡಿನ ಪುಣ್ಯ

2

ವಿಶ್ವಾಮಿತ್ರನಿಗೆ ಕೊಟ್ಟ ವಚನಕ್ಕೆ ಕಟ್ಟುಬಿದ್ದು ರಾಜ್ಯತ್ಯಾಗ ಮಾಡುವ ಹರಿಶ್ಚಂದ್ರನನ್ನು ಕಂಡು, 'ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ' ಎಂದು ಭಾವಿಸಿ ಪ್ರಜಾಸಮೂಹ ಶೋಕಿಸಿತೆಂದು ಕವಿ ರಾಘವಾಂಕ ಹೇಳುತ್ತಾನೆ. 'ಹರಿಶ್ಚಂದ್ರ ಕಾವ್ಯ' ಪ್ರಸಂಗ ಮರುಕಳಿಸಿದಂತಿದ್ದ ಪುನೀತ್ ರಾಜ್‌ಕುಮಾರ್ ಅವರ ನಿರ್ಗಮನವೂ (ನಿಧನ: ಅ. 29, 2021) ಕನ್ನಡದ ಜನತೆಗೆ ನಾಡಿನ ಪುಣ್ಯದ ನಿರ್ಗಮನದಂತೆಯೇ ಕಾಣಿಸಿತು. 2022ರ ವರ್ಷದುದ್ದಕ್ಕೂ ಅವರ ನೆನಪು ಬೇರೆ ಬೇರೆ ರೀತಿಗಳಲ್ಲಿ ನಾಡನ್ನು ಆವರಿಸಿಕೊಂಡಿತು. 'ಜೇಮ್ಸ್' ಹಾಗೂ 'ಗಂಧದಗುಡಿ' ಸಿನಿಮಾಗಳ ಬಿಡುಗಡೆ ಹಬ್ಬದಂತೆ ಪರಿಣಮಿಸಿತು. ಈ ಸಂಭ್ರಮಕ್ಕೆ ಕೋಡು ಮೂಡಿದ್ದು 'ಕರ್ನಾಟಕ ರತ್ನ' ಪ್ರಶಸ್ತಿ ಸಂಭ್ರಮ. ನವೆಂಬರ್ 1ರಂದು ಪುನೀತ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಯಿತು. ವಿಧಾನಸೌಧದ ಮೆಟ್ಟಿಲುಗಳ ಮೇಲೆ ರಾಜ್ಯಸರ್ಕಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತದ ಪ್ರಖ್ಯಾತ ನಟರಾದ ರಜನಿಕಾಂತ್ ಹಾಗೂ ಜೂನಿಯರ್ ಎನ್‌ಟಿಆರ್ ಭಾಗವಹಿಸಿದ್ದರು. ಪುನೀತ್ ಈಗ ವ್ಯಕ್ತಿಯಲ್ಲ, ಅವರು ಯುವಪೀಳಿಗೆಗೆ ಪ್ರೇರಣಾಶಕ್ತಿ. ಅವರ ಜನ್ಮದಿನವನ್ನು (ಮಾರ್ಚ್ 17) 'ಸ್ಫೂರ್ತಿ ದಿನ' ಎಂದು ಆಚರಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಿಸಿದೆ.

## ನಾಡಿನ ಕಳಂಕ

3

ಪುನೀತ್ ರಾಜ್‌ಕುಮಾರ್ ನಾಡಿನ ಪುಣ್ಯದಂತೆ ಕಂಡಂತೆ, ಕಳಂಕದಂತೆ ಕಾಣಿಸುತ್ತಿರುವುದು ಚಿತ್ರದುರ್ಗದ ಮುರುಘಾಮಠದಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯದ ಪ್ರಕರಣ. ಧರ್ಮ ಮತ್ತು ಅಧಿಕಾರದ ದುರ್ಬಳಕೆಯ ರೂಪದಲ್ಲಿ ನೋಡಬಹುದಾದ ಈ ಪ್ರಕರಣ, ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸುವಂತಹದ್ದು. ಧಾರ್ಮಿಕ ಸಂಸ್ಥೆಯ ಆವರಣದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನುವ ಆರೋಪದಡಿ, ಶಿವಮೂರ್ತಿ ಮುರುಘಾ ಶರಣರು ಹಾಗೂ ವಸತಿ ನಿಲಯದ ವಾರ್ಡನ್ ಸೇರಿದಂತೆ ಒಟ್ಟು ಐವರ ಮೇಲೆ, 'ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ' (ಪೋಕ್ಸೊ) ಅನ್ವಯ ಪ್ರಕರಣ ದಾಖಲಾಗಿದೆ. ಚಿತ್ರದುರ್ಗದ ವಸತಿ ನಿಲಯದ ವಿದ್ಯಾರ್ಥಿನಿಯರು ದೂರು ನೀಡಿದ್ದಾರೆ. ದೂರುದಾರರಲ್ಲಿ ಓರ್ವ ವಿದ್ಯಾರ್ಥಿನಿಯ ಮೇಲೆ ಮೂರೂವರೆ ವರ್ಷದಿಂದ ಹಾಗೂ ಮತ್ತೊಬ್ಬ ಬಾಲಕಿಯ ಮೇಲೆ ಒಂದೂವರೆ ವರ್ಷದಿಂದ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಸನ್ಯಾಸಿಗಳನ್ನು, ಸ್ವಾಮೀಜಿಗಳನ್ನು ಬ್ರಹ್ಮಚರ್ಯಕ್ಕೆ ಕಟ್ಟಿಹಾಕುವುದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಲಿಕ್ಕೆ ಈ ಪ್ರಕರಣ ಅವಕಾಶ ಕಲ್ಪಿಸಿದೆ.

ಹಿಜಾಬ್ ಗಲಭೆಯ ನಡುವೆಯೂ, ಉಡುಪಿ ಪರಿಸರದಲ್ಲಿ ವಿವಿಧ ಧರ್ಮಗಳ ವಿದ್ಯಾರ್ಥಿನಿಯರ ಮುಕ್ತಾಗದ ಒಗ್ಗಟ್ಟು. ಫೋಟೊ: ಇರ್ಷಾದ್ ಮಹಮ್ಮದ್

